ಓ.ಎಸ್. ನಂ. 32/2020

ಪಿ.ಡಬ್ಲ್ಯು: 01 (ಬಸವರಾಜ)

ದಿನಾಂಕಃ 20.09.2023 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ RR ವಕೀಲರಿಂದಃ

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆಃ

1. ಗುಡೆಕೋಟೆ ನಾಡ ಕಾರ್ಯಾಲಯದವರಿಗೆ ನೀಡಿದ ವಂಶವೃಕ್ಷ ದಾಖಲಾತಿಗಳನ್ನು ಕೋರಿ ಸಲ್ಲಿಸಿದ ಮನವಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 01 ಎಂದು ಗುರುತಿಸಲಾಯಿತು.
2. ವಂಶವೃಕ್ಷ ದೃಢೀಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿಃ 02 ಎಂದು ಗುರುತಿಸಲಾಯಿತು.
3. ನನ್ನ ತಂದೆ ಮರಣ ಪ್ರಮಾಣ ಪತ್ರದ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 03 ಎಂದು ಗುರುತಿಸಲಾಯಿತು.
4. ನನ್ನ ಕುಟುಂಬದ ವಂಶವೃಕ್ಷದ ಪ್ರಮಾಣ ಪತ್ರದ ಅಸಲು ಪ್ರಕಾರ ನಕಲು ಪ್ರತಿಯನ್ನು ಉಪ ತಹಶೀಲಾದರವರಿಂದ ಪಡೆದಿದ್ದು, ಅದನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 04 ಎಂದು ಗುರುತಿಸಲಾಯಿತು.
5. ವಂಶವೃಕ್ಷದ ಬಗ್ಗೆ ನಡೆಸಿದ ಮಹಜರ್ ಅಸಲು ಪ್ರಕಾರ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 05 ಎಂದು ಗುರುತಿಸಲಾಯಿತು.
6. ವಂಶವೃಕ್ಷದ ಬಗ್ಗೆ ಕಂದಾಯ ಇಲಾಖೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 06 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಕೂಡ್ಲಿಗಿ.